ತುಂಗಭದ್ರಾ ನದಿಯಿಂದ ಕುಡಿಯುವ ನೀರನ್ನು ಪೂರೈಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 217(1577),

ಸದಸ್ಯರ ಹೆಸರು ಶ್ರೀ ಗಡ್ಡದೇವರಮರ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)

ಉತ್ತರಿಸುವ ಸಚಿವರು ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ,

ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) ಶಿರಹಟ್ಟಿ ಮತಕ್ಷೇತ್ರದ ಬೆಳ್ಳಟ್ಟಿ ಹಾಗೂ ಸುತ್ತಮುತ್ತಲಿನ ಜನತೆ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ತುಂಗಭದ್ರಾ ನದಿಯಿಂದ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆಯು ಮಂಜೂರಾತಿಗಾಗಿ ಸರ್ಕಾರಕ್ಕೆ ಬಂದಿದೆಯೇ,

ಬಂದಿದೆ

ಆ) ಬಂದಿದ್ದಲ್ಲಿ, ಈ ಪ್ರಸ್ತಾವನೆಯ ಮಂಜೂರಾತಿಗಾಗಿ ಸರ್ಕಾರ ಕ್ರಮ ಕೈಗೊಳ್ಳುವುದೇ,

ಸದರಿ ಯೋಜನೆಯ ರೇಖಾ ಅಂದಾಜಿಗೆ ದಿನಾಂಕ 18–10–2006ರಂದು ನಡೆದ ರಾಜ್ಯ ಮಟ್ಟದ ಎಂಪವರ್ಡ್ ಸಮಿತಿ ಸಭೆ ಅನುಮೋದನೆ ನೀಡಿದೆ

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು,

ಸದರಿ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಅನುದಾನ ಬಿಡುಗಡೆಗೊಳಿಸಲು ಪ್ರಸ್ತಾಪಿಸಿದೆ ಕೇಂದ್ರದಿಂದ ಈ ಯೋಜನೆಗಾಗಿ ಅನುದಾನ ಬಿಡುಗಡೆಯಾದ ಕೂಡಲೇ ಅನುಷ್ಟಾನ ಸಲುವಾಗಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು

ಈ) ಇದರ ಅಂದಾಜು ಮೊತ್ತ ಎಷ್ಟು,

ರೂ 601 13 ಲಕ್ಷ

ಉ) ಇದರಲ್ಲಿ ಯಾವ ಯಾವ ಗ್ರಾಮಗಳು ಒಳಗೊಂಡಿವೆ (ಗ್ರಾಮಗಳ ವಿವರ ತಿಳಿಸುವುದು)?

ಈ ಯೋಜನೆಯ ವ್ಯಾಪ್ತಿಗೆ (1) ಇಟಗಿ (2) ಸಾಸಲವಾಡ (3) ಕೂಗನೂರ (4) ಅಂಕಲಿ (5) ತಂಗೋಡ (6) ನಾಗರಮಡುವು (7) ಗೋವನಕೊಪ್ಪ (8) ವಡವಿ (9) ಹೊಸೂರು (10) ಅಲಗಿನವಾಡ (11) ಬೆಳಗಟ್ಟ (12) ಬೆಳ್ಳಟ್ಟಿ (13) ನಾರಾಯಣಪುರ (14) ಬಿಜ್ಜೂರ (15) ಚಿಕ್ಕಸವಣೂರ ಗ್ರಾಮಗಳು ಬರುತ್ತವೆ

ಶ್ರೀ ಗಡ್ಡದೇವರ ಮರ ಗಡ್ಡಯ್ಯ ಶಿವಮೂರ್ತಯ್ಯ ಸನ್ಮಾನ್ಯ ಅಧ್ಯಕ್ಷರೆ, ಕೊಟ್ಟಂಥ ಉತ್ತರ ತೃಪ್ತಿಕರವಾಗಿದೆ ಈ ದಿಸೆಯಲ್ಲಿ ಸನ್ಮಾನ್ಯ ರವೀಂದ್ರನಾಥ ಸಾಹೇಬರ ಬಗ್ಗೆ ನನಗಂತೂ ಬಹಳ ಗೌರವವಿದೆ ಅಂತೂ ಈ ಅವಸ್ಥೆಯೊಳಗಾದರೂ ಅವರು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಆದರೆ, ಇದು ನನ್ನ ಕರ್ತವ್ಯವೆಂದು ನಾನು ಭಾವಿಸಿಕೊಂಡಿದ್ದೇನೆ ಈಗ ಇದು ಎಷ್ಟು ತಡವಾಗುತ್ತದೋ, ಅಲ್ಲಿನ severity, seriousness ಅನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿಕೊಳ್ಳುತ್ತೇನೆ ನನ್ನ ತಾಲ್ಲೂಕಿನ ಪ್ರದೇಶದಲ್ಲಿ ಏನು ಸ್ಥಿತಿ ಇದೆಯೆಂದರೆ, ಪ್ರತಿ ವರ್ಷ ಮಳೆಗಾಲದಲ್ಲಿ ತೇಲುವ ಮೋಡಗಳನ್ನು ನೋಡುತ್ತೇವೆಯೇ ಹೊರತು, ಮೋಡಗಳ ನೆರಳಿನಲ್ಲಿ ಇರುತ್ತೇವೆಯೇ ಹೊರತು, ಮೋಡಗಳಿಂದ ನಮಗೆ ಮಳೆ ಇಲ್ಲವೇ ಇಲ್ಲ ಅಂತಹ ಒಂದು ಪರಿಸ್ಥಿತಿಯಲ್ಲಿ ಜನರಿಗಾಗಲಿ, ಜಾನುವಾರುಗಳಿಗಾಗಲಿ, ಕುಡಿಯುವ ನೀರಿಗೆ ಅತೀವವಾದ ತೊಂದರೆ ನಮ್ಮ ಪ್ರದೇಶದಲ್ಲಿದೆ ನನ್ನ ಮತ ಕ್ಷೇತ್ರದೊಳಗೆ ಸುಮಾರು 46 ಹಳ್ಳಿಗಳನ್ನು fluorosis villages ಎಂದು declare ಆಗಿದೆ ಆದರೆ, ದುರ್ದೈವ ತಾವು ನಮ್ಮ ಕ್ಷೇತ್ರಕ್ಕೆ ಒಮ್ಮೆ ಭೇಟಿ ಕೊಡಬೇಕು ಇಂತಹ ಸನ್ನಿವೇಶದಲ್ಲಿ ನಾವು ಕಾಣುವುದೇನೆಂದರೆ, ಸುಮಾರು 35 ವರ್ಷದ ಜನರನ್ನು ನೋಡಿದರೆ, ಇವರಿಗೆ 75 ವರ್ಷಗಳಾಗಿದೆಯೆಂದು ಕಾಣುತ್ತದೆ 35 ವರ್ಷಕ್ಕೇ ಆ ಪ್ರದೇಶದಲ್ಲಿನ ಜನರ ಹಲ್ಲು ಬಿದ್ದು ಹೋಗಿರುತ್ತದೆ! ಅಂತಹ ಒಂದು ಕರಿಣವಾದ ಪರಿಸ್ಥಿತಿ ಇದೆ ಇನ್ನು ತಾಯಿಂದರ ಪರಿಸ್ಥಿತಿ ಹೇಗಿದೆಯೆಂದರೆ, ಅವರೆಷ್ಟೇ ಬಾಂಡಲೆ ತಿಕ್ಕಿದರೂ, ಆ ಬಾಂಡಲೆ ಬೆಳ್ಳಗಾಗುವುದಿಲ್ಲ! ಅಂತಹ ಒಂದು ಕರಿಣವಾದ fluorosis content ಹೊಂದಿರುವ ನೀರನ್ನು ಇದುವರೆಗೂ ನಾವು ಅವರಿಗೆ ಕುಡಿಸುತ್ತಿದ್ದೇವೆ

ಯೋಜನೆಯೇನೋ ಇಲ್ಲಿಯವರೆಗೆ ಬಂದಿದೆ ಆದರೆ, ಅದಷ್ಟು ತೀವ್ರಗತಿಯಲ್ಲಿ ಆ ಯೋಜನೆಯನ್ನು ಜಾರಿಗೊಳಿಸುವ ವ್ಯವಸ್ಥೆ ಮಾಡಿ ಆ ಭಾಗದ ಜನರಿಗೆ ಆದಷ್ಟು ಶೀಘ್ರ ನೀರನ್ನು ಕೊಡಿಸುವಂಥ ವ್ಯವಸ್ಥೆಯನ್ನು ಮಾಡಿದರೆ ನಾನು ಅವರಿಗೆ ಧನ್ಯವಾದವನ್ನು ಹೇಳಲು ಇಚ್ಚಿಸುತ್ತೇನೆ ಎಷ್ಟು ದಿವಸಗಳೊಳಗೆ ನೀರನ್ನು ಕೊಡಿಸಬಹುದು ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ್ 18 10 2006ರ ರಾಜ್ಯ ಮಟ್ಟದ empowered committee ಯಿಂದ ಇದು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಹೋಗಿದೆ ಅದು ಬಂದ ತಕ್ಷಣವೇ ಆ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಯತ್ನ ಮಾಡುತ್ತೇವೆ

ಶ್ರೀ ಗಡ್ಡದೇವರಮರ ಗಡ್ಡಯ್ಯ ಶಿವಮೂರ್ತಯ್ಯ ಅಲ್ಲಿ ಅತ್ಯಂತ ಕರಿಣವಾದ ಪರಿಸ್ಥಿತಿ ಇದೆ ಬಹಳಷ್ಟು ಗ್ರಾಮೀಣ ಪ್ರದೇಶದಲ್ಲಿ ನೀರಿಲ್ಲದಂತಹ ಪ್ರಸಂಗವಾಗಿದೆ

ದನಕರುಗಳಿಗೂ ನೀರಿಲ್ಲದಿರುವ ಪರಿಸ್ಥಿತಿಯಾಗಿದೆ ಆದ್ದರಿಂದ ಅಲ್ಲಿಯವರೆಗೆ ಹೆಚ್ಚೆ ಬೋರ್‌ವೆಲ್‌ಗಳನ್ನು ಕೊರೆಸಿ ನೀರನ್ನು ಒದಗಿಸುವ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್ ಎ ರವೀಂದ್ರನಾಥ ಆ ಸ್ಥಿತಿ ಇದ್ದರೆ ಆದಷ್ಟು ಬೇಗ ಬೋರ್‌ವೆಲ್‌ನ್ನು ಕೊರೆಸಲು ಹಣವನ್ನು ಮಂಜೂರು ಮಾಡಿಸಿಕೊಡುತ್ತೇವೆ

ಜಿಲ್ಲಾ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರಿ ವಕೀಲರನ್ನು ನೇಮಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ **218(1396),**
ಸದಸ್ಯರ ಹೆಸರು **ಶ್ರೀ ಹಾಲಪ್ಪ ಹೆಚ್ (ಹೊಸನಗರ),**
ಉತ್ತರಿಸುವವರು **ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)**

ಅ) ರಾಜ್ಯದ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳ ಮೇಲೆ ಸಾರ್ವಜನಿಕರು ವಿವಿಧ ಮೊಕದ್ದಮೆಗಳನ್ನು ಹೂಡಿದಾಗ, ಸ್ಥಳೀಯ ಸಂಸ್ಥೆಗಳ ಪರವಾಗಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ನಡೆಸಲು ಸರ್ಕಾರದ ವಕೀಲರನ್ನು ನೇಮಿಸಲಾಗುತ್ತಿದೆಯೇ,

ಜಿಲ್ಲಾ / ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸಂಸ್ಥೆಗಳಾದ್ದರಿಂದ ಸರ್ಕಾರದ ವಕೀಲರನ್ನು ನೇಮಿಸುತ್ತಿಲ್ಲ ಆದರೆ, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳೇ ತಮ್ಮಲ್ಲಿ ಲಭ್ಯವಿರುವ ನ್ಯಾಯವಾದಿಗಳ ಪ್ಯಾನಲ್‌ನಿಂದ ವಕೀಲರನ್ನು ನೇಮಕ ಮಾಡಲಾಗುತ್ತದೆ

ಆ) ನೇಮಿಸಿದ್ದಲ್ಲಿ, ಈ ಪಂಚಾಯತಿಗಳಲ್ಲಿ ವಿವಿಧ ಮೊಕದ್ದಮೆಗಳು ಬಾಕಿ ಇರುವ ಯಾವ ಯಾವ ಪ್ರಕರಣಗಳು ಯಾವ ಯಾವ ಹಂತದಲ್ಲಿದೆ,

ಮೂರು ಹಂತದ ಪಂ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳು ವಿವಿಧ ನ್ಯಾಯಾಲಯಗಳಲ್ಲಿ ಹಾಗೂ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ

ಇ) ನೇಮಿಸದಿದ್ದಲ್ಲಿ, ಸರ್ಕಾರಿ ವಕೀಲರನ್ನು ಯಾವಾಗ ನೇಮಿಸಲಾಗುವುದು ಸರ್ಕಾರವನ್ನು ಪ್ರತಿವಾದಿಯನ್ನಾಗಿ ಮಾಡಿದ ಪ್ರಕರಣಗಳಲ್ಲಿ ಸರ್ಕಾರಿ ವಕೀಲರನ್ನು ನೇಮಿಸಲಾಗುವುದು

ಈ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ರಿಪ್ಪನಪೇಟೆ ಗ್ರಾಮ ಪಂಚಾಯತಿ ಬರುವ ಗ್ರಾಮಕ್ಕೆ ಸಂಬಂಧಿಸಿದ ಸರ್ವೆ ನಂ 43ಕ್ಕೆ ಹೈ ಕೋರ್ಟ್‌ರಿಟ್ ಪಿಟಿಷನ್ ನಂ ಡಬ್ಲ್ಯೂಪಿ 22999 05 ಹಾಗೂ 17199 05 ಮತ್ತು 545 06